ತೋಟಗಾರಿಕೆ ಮಂಡಲಿ ಅವರು ಮಂಜೂರು ಮಾಡಿ ಕೊಟ್ಟಿದ್ದಾರೆ. ಈಗ ನಮ್ಮಲ್ಲಿ ೧೭ ಸಾವಿರದ ೯೯ ಟನ್‌ಗಳ ಸಂಗ್ರಹಣಾ ಸಾಮರ್ಥ್ಯವುಳ್ಳ ಶೀತಲ ಗೃಹಗಳಿದ್ದು, ಇದನ್ನು ಹೆಚ್ಚು ಮಾಡಬೇಕು ಎಂಬ ವಿಚಾರ ಇದೆ. ಮುಖ್ಯವಾಗಿ ಇದು ದೊಡ್ಡ ವ್ಯಾಪ್ತಿಯ ಹಿನ್ನೆಲೆಯಾಗಿರುವ ಪ್ರಶ್ನೆ ಆಗಿರುವುದರಿಂದ ಹೆಚ್ಚಿನ ವಿವರಗಳನ್ನು ಬೇಡಿಕೆಗಳ ಮೇಲಿನ ಚರ್ಚೆಗೆ ಉತ್ತರ ಕೊಡುವಾಗ ಹೇಳುತ್ತೇನೆ.

ಪ್ರಶ್ನೆ ಸಂಖ್ಯೆ : ೪೯೧ (೧೪೬೬) (ಮಾನ್ಯ ಸದಸ್ಯರು ಗೈರು ಹಾಜರು)

ಪ್ರಶ್ನೆ ಸಂಖ್ಯೆ : ೪೯೨ (೧೬೩೨) (ಮಾನ್ಯ ಸದಸ್ಯರು ಗೈರು ಹಾಜರು)

## ಹಾಸನ ಪುರಸಭೆಯಲ್ಲಿ ರೋಜ್‌ಗಾರ್ ಯೋಜನೆ ಬಗ್ಗೆ

೪೯೩ (೧೪೪೫) ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಹಾಸನ ಸಿಟಿ ಮುನಿಸಿಪಾಲಿಟಿಗೆ ಇದುವರೆಗೆ ರೋಜಗಾರ್ ಯೋಜನೆಯಲ್ಲಿ ಎಷ್ಟು ಹಣ ಒದಗಿಸಲಾಗಿದೆ ?

ಆ) ಈ ಹಣದಲ್ಲಿ ಇದುವರೆಗೆ ಎಷ್ಟು ಹಣ ಖರ್ಚಾಗಿದೆ ?

ಇ) ಹಾಸನ ಪಟ್ಟಣದಲ್ಲಿ ರೋಜಗಾರ್ ಯೋಜನೆಯಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ, ಯಾವ ಯಾವ ಕೆಲಸಕ್ಕೆ ಎಷ್ಟು ಹಣ ಖರ್ಚಾಗಿದೆ ವಿವರಕೊಡಿ ?

ಈ) ಯಾವ ಆಧಾರದ ಮೇಲೆ ಈ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ?

ಉ) ಈ ಕೆಲಸಗಳನ್ನು ಮೇಲ್ಪಟ್ಟವರ್ಯಾರದರೂ ಪರಿಶೀಲಿಸಿದ್ದಾರೆಯೇ ?

ಊ) ಈ ಪರಿಶೀಲನಾ ತಂಡ ಈ ಕೆಲಸಗಳ ಬಗ್ಗೆ ಏನು ವರದಿ ಕೊಟ್ಟಿದೆ ? ವಿವರ ಕೊಡಿ ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ನಗರ ಸಭೆ ಹಾಸನಕ್ಕೆ ನೆಹರು ರೋಜಗಾರ ಯೋಜನೆಯಡಿಯಲ್ಲಿ ಇದುವರೆಗೂ ಹಣ ಮಂಜೂರು ಮಾಡಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಯೋಜನೆ ಅಡಿಯಲ್ಲಿ ಮಂಡಲ್ ಪಂಚಾಯತ್ ಮತ್ತು ಜಿಲ್ಲಾ ಪರಿಷತ್‌ಗಳಿಗೆ ಹಣ ಕೊಟ್ಟರುವಂತೆ ಮುನಿಸಿಪಾಲಿಟಿಗಳಿಗೆ ರೋಜ್‌ಗಾರ್ ಯೋಜನೆ ಅಡಿಯಲ್ಲಿ ಹಣ ಬಿಡುಗಡೆ ಮಾಡಿಲ್ಲವೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಬಿಡುಗಡೆ ಮಾಡಿಲ್ಲವೆಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಈ ಅಕೌಂಟ್‌ನಲ್ಲಿ ಡಿಪಾಜಿಟ್ ಮಾಡಿದ್ದೇವೆ ಎಂದು ನಾಲ್ಕೈದು ತಿಂಗಳ ಹಿಂದೆ ಹೇಳಿದ್ದು ನನಗೆ ಜ್ಞಾಪಕ ಇದೆ. ಹಾಗಾದರೆ ನೀವು ಹಣ ಕೊಡದಿದ್ದರೆ ಡಿಪಾಸಿಟ್ ಹೇಗೆ ಬಂತು ?

ಅಧ್ಯಕ್ಷರು.—ಯಾರು ತಮಗೆ ಕೊಟ್ಟಿದ್ದಾರೆ ಎಂದು ಹೇಳಿದರಲ್ಲ, ಅವರನ್ನು ನೀವು ಕೇಳಿ. ಎಲ್ಲಿ ಕೊಟ್ಟಿದ್ದಾರೆ ಎಂದು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅವರು ಕೇಳಿದ ಪ್ರಶ್ನೆಗೆ ನೇರವಾಗಿ ನಾನು ಉತ್ತರ ಹೇಳಿದ್ದೇನೆ.

ಶ್ರೀ ಕೆ. ಹೆಚ್. ಹನುಮೇಗೌಡ.—ನನಗೆ ತಿಳಿದ ಮಟ್ಟಿಗೆ ಹಣ ಬಂದಿದೆ, ಅದನ್ನು ವಿಚ್ರ್ ಮಾಡಬೇಡಿ ಎಂದು ಸಧ್ಯಕ್ಕೆ ಆದೇಶ ಬಂದಿದೆ ಎಂದು ಹೇಳಿದ್ದರು. ಅದು ನಿಜವೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಆ ರೀತಿ ಆದೇಶ ಇಲ್ಲಿಂದ ಹೋಗಿಲ್ಲ. ಹಾಸನ ಪುರಸಭೆಗೆ ಈಗ ಅರ್ಬನ್ ಮೈಕ್ರೋ ಪ್ರಾಜೆಕ್ಟ್‌ನ ಒಂದು ಯೋಜನೆ ಮತ್ತು ವೇಜಸ್ ಆಕ್ಟ್ ಹಿನ ಇದೆ. ಆ ಒಂದು ಸ್ಕೀಂಗಳಲ್ಲಿ ಅಲ್ಲಿಗೆ ಹಣ ಕೊಡುವಂತಹ ಒಂದು ತೀರ್ಮಾನ ಕೈಗೊಂಡಿದ್ದೇನೆ. ಈಗ ಅಧಿವೇಶನ ಮುಗಿದ ತಕ್ಷಣ.

ಅಧ್ಯಕ್ಷರು.—ಹಾಗಿದ್ದರೆ ಇನ್ನೂ ಹಣ ಕೊಟ್ಟಿಲ್ಲ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇನ್ನೂ ಕೊಟ್ಟಿಲ್ಲ, ನಾವು ಕೊಡುತ್ತೇವೆ.

ಅಧ್ಯಕ್ಷರು.—ಹಾಗಿದ್ದರೆ ಸರಿ.

## ಇಳಕಲ್ ಹಾಗೂ ಹುನಗುಂದ್ ನಗರಗಳ ಕುಡಿಯುವ ನೀರಿನ ಯೋಜನೆಯನ್ನು ಪ್ರಾರಂಭಿಸುವ ಬಗ್ಗೆ

೪೪೪ (೧೧೭೫) ಶ್ರೀ ಎಸ್. ಆರ್. ಕಾಶಪ್ಪನವರ್ (ಹುನಗುಂದ).—ಮಾನ್ಯ ಬಂದರು. ಮೀನುಗಾರಿಕೆ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಇಳಕಲ್ ಹಾಗೂ ಹುನಗುಂದ ಅವಳಿ ನಗರಗಳ ಕುಡಿಯುವ ನೀರಿನ ಯೋಜನೆಗಾಗಿ ಈ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ?

ಆ) ಸದರಿ ಕೆಲಸವು ಎಂದು ಪ್ರಾರಂಭಿಸಿ ಯಾವಾಗ ಮುಗಿಸಲು ಯೋಜನೆಯಾಗಿದೆ ?

ಇ) ಈ ಯೋಜನೆಯ ಕ್ಷೇತ್ರ ಹಣದ ರೂಪದಲ್ಲಿ ಇಳಕಲ್ ನಗರ ಸಭೆಯು ಸರ್ಕಾರಕ್ಕೆ ಎಷ್ಟು ಹಣ ತುಂಬಬೇಕು ಹಾಗೂ ಎಷ್ಟು ಕಂತಿನಲ್ಲಿ ತುಂಬಬೇಕು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಸರ್ಕಾರದವರು ಒದಗಿಸಿರುವ ಆರ್ಥಿಕ ನೆರವಿನಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ೧೯೯೦-೯೧ನೇ ಸಾಲಿನಲ್ಲಿ ಆಯವ್ಯಯ ಪಟ್ಟಿಯಲ್ಲಿ ೨೫ ಲಕ್ಷ ರೂಪಾಯಿಗಳನ್ನು ಈ ಯೋಜನೆಗೆ ತೆಗೆದಿರಿಸಲಾಗಿದೆ. ಇದಲ್ಲದೆ ಬೀದರನ್ನೂ ನಿಗಮದಿಂದಲೂ ಸಾಲವನ್ನು ಪಡೆಯಲಾಗುವುದು.

ಆ) ಟೆಂಡರ್‌ಗಳನ್ನು ಕರೆಯಲಾಗಿದ್ದು ಇನ್ನೂ ೩ ತಿಂಗಳೊಳಗೆ ಗುತ್ತಿಗೆದಾರರನ್ನು ನೇಮಿಸಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗುವುದು. ಈ ಯೋಜನೆಯನ್ನು ಇನ್ನೂ ೩ ವರ್ಷಗಳಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಇ) ಇಳಕಲ್ ನಗರಸಭೆಯ ಷೇರ್ ಹಣ ೪೮ ಲಕ್ಷ ರೂಪಾಯಿಗಳಾಗಿರುತ್ತವೆ, ಒಂದು ಅಥವಾ ಎರಡು ಕಂತುಗಳಲ್ಲಿ ತುಂಬಬಹುದು.

ಶ್ರೀ ಎಸ್. ಆರ್. ಕಾಶಪ್ಪನವರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಟೆಂಡರುಗಳನ್ನು ಕರೆಯಲಾಗಿದ್ದು, ಇನ್ನು ಮೂರು ತಿಂಗಳಲ್ಲಿ ಗುತ್ತಿಗೆದಾರರನ್ನು ನೇಮಿಸುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗಾಗಲೇ ಟೆಂಡರ್ ಕರೆಯಲಾಗಿದೆ. ಆದರಲ್ಲಿ ಲೋಯಸ್ಟ್